Regd No BG 155

— ಶ್ರೀ —

23—1—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಅಣೆ

Protect the cow

ಸ್ಥಾಪಕರು— ಅರಮನೆ ಸಿರಸ್ತೇದಾರ್ ಎಂ. ವಿ ಸುಬ್ಬರಾಯರು [ಬಿಡಿ ಪ್ರತಿ 3 ಪೆ

ಗೋಸಂರಕ್ಷಣೆ ಮಾಡಿ

ಗಣರಾಜ್ಯ ದಿನದಂದು

ಈ ತಿಂಗಳು 26 ನೆಯ ತಾ|| ನವ ದೆಹಲಿಯಲ್ಲಿ ಗಣರಾಜ್ಯ ಮಹೋತ್ಸವ ವೈಭವದಿಂದ ನೆರವೇರುವುದು ಭಾರತದ ನಾನಾ ಭಾಗಗಳ ಜೀವನವನ್ನು ಪ್ರದರ್ಶಿಸುವ 18 ಟ್ಯಾಬಿಲೋಗಳು ಇರುವುವು

ಕಾಂಗ್ರೆಸಿಗರಿಗೆ ಜತ್ತಿರ ಹಿತೋಕ್ತಿ

ರಾಜ್ಯಗಳಲ್ಲಿ ಸರ್ವ ಕೋಮುಗಳಿಗೆ ಭಾರತ ಕಾಂಗ್ರೆಸು ಸಮಿತಿ ಸ್ಥಾನಗಳನ್ನಿತ್ತಿದೆ ಆ ವಿಷಯದಲ್ಲಿ ಯಾವ ಕೋಮು ಕೂಡ ಕಾಂಗ್ರೆಸು ಪಕ್ಷವನ್ನ ದೂರುವಂತಿಲ್ಲ. ಸ್ಪರ್ಧಿಸಲು ಟಿಕೇಟು ದೊರೆಯುವವರಿಗೆ ಟಿಕೇಟುಗಳಿಗೆ ಹೊಡೆದಾಡುವದು ಕಾಂಗ್ರೆಸಿಗರಿಗೆ ಸರಿಯಾದುದು. ಸ್ಪರ್ಧಿಗಳ ಕಡೆಯ ಪಟ್ಟಿ ಪ್ರಕಟವಾದನಂತರ ಕಾಂಗ್ರೆಸಿಗರು ತಮ್ಮ ಭಿನ್ನಾಭಿಪ್ರಾಯವನ್ನು ಮರೆತು ಸಂಸ್ಥೆಯನ್ನು ಕಟ್ಟಲು ಪ್ರಯತ್ನಿಸಬೇಕು ಹೀಗೆಂದು ಮುಖ್ಯ ಮಂತ್ರಿ ಶ್ರೀ ಬಿ. ಡಿ ಜತ್ತಿಯವರು ಬಿಜಾಪುರದ ಟಿಲ್ಗಿ ಗ್ರಾಮದಲ್ಲಿ ತಿಳಿಸಿದರು.

ರಾಜೀನಾಮೆ

ಹೊನ್ನಾಳಿ ತಾಲ್ಲೂಕು ಬೋರ್ಡಿನ ಅಧ್ಯಕ್ಷರಾದ ಶ್ರೀ ಟಿ ಮೈಲಪ್ಪನವರು ಅಧ್ಯಕ್ಷ ಪದವಿಗೆ ರಾಜೀನಾಮೆ ಇತ್ತಿರುವರು. ತಾಲ್ಲೂಕು ಬೋರ್ಡಿನ 4ವರ್ಷಗಳ ಅವಧಿಯಲ್ಲಿ ನಾಲ್ಕು ಸದಸ್ಯರು ಒಂದೊಂದು ವರ್ಷ ಅಧ್ಯಕ್ಷರಾಗಿರಬೇಕೆಂದು ಆಡಳಿತ ಪಕ್ಷ ನಿರ್ಧರ ಮಾಡಿದುದನ್ನು ಪ್ರತಿಭಟಿಸಿ ಅವರು ರಾಜೀನಾಮೆ ಇತ್ತರು.

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

24 ಚೌತಿ ಪುಬ್ಬ

ಮಹಿಳೆಯರ ಕಾಟದಿಂದ ಲಂಡನ್ ತ್ಯಾಗ !

ಲಂಡನ್ನಿನಲ್ಲಿ ವಾಸವಾಗಿದ್ದ 40 ವಯಸ್ಸಿನ ಕ್ಯಾಪ್ಟನ್ ನೇಲರ್ ಡೌಗ್ಲಾಸ್ ಎಂಬ ಬ್ರಹ್ಮಚಾರಿ ಮಹಿಳೆಯರ ಹಿಂಸೆ ತಡೆಯಲಾರದೆ ಇಟಲಿಗೆ ಹೋದರು. 91 ವಯಸ್ಸಿನ ವೃದ್ಧೆಯೋರ್ವರು ಮೂರು ತಿಂಗಳು ಹಿಂದೆ ಕ್ಯಾಪ್ಟನ್‌ರಿಗೆ 50 ಸಹಸ್ರ ಪೌಂಡುಗಳ ಸ್ವತ್ತು ಕೊಟ್ಟು ಅವರು ವಿವಾಹವಾಗದಂತೆ ಷರತ್ತು ಹಾಕಿರುವರು. ಅವರನ್ನು ಮದುವೆ ಆಗುವದಾ ಅವರಿಗೆ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪತ್ರವನ್ನು ಬರೆಯುತ್ತಿರುವರು ಈ ಹಿಂಸೆಯಿಂದ ಪಾರಾಗಲು ಅವರು ಲಂಡನ್ ಬಿಟ್ಟರು.

ಬಂದಿಗಳ ಆಕ್ರಮಣ

ಗಾಂಜಾ ಸೇದಲು ಅನುಮತಿ ಕೊಡದ ಕಾರಣ ಸೇಲಂ ಒಂದೀ ಖಾನೆಯಲ್ಲಿ ಮೂವರು ಬಂದಿಗಳು ಕಲ್ಲು, ಇಟ್ಟಿಗೆ ಹಾಗೂ ಕಬ್ಬಿಣದ ರಾಡುಗಳಿಂದ ಜೈಲು ಸೂಪರಿನ್ ಟೆಂಡೆಂಟ್, ಡೆಪ್ಯುಟಿ ಜೈಲರ್ ಹಾಗೂ ವಾರ್ಡರುಗಳನ್ನು ಹೊಡೆದು ಗಾಯಮಾಡಿದ್ದಾರೆ ಅವರ ಮೇಲೆ ಕೊಲೆ ಆಪಾದನೆ ಹೊರಿಸಿದೆ.

ಶಾಲೆ ಬಂದ್

ಚಿಯಾಂಗ ಕೈಷೇಕ್ ಪರ ಇರುವ ಚೀಣಾದವರು ದಾಳಿ ಮಾಡಿದ ಕಾರಣ ಕಾಲಿಂಪಾಂಗಿನಲ್ಲಿರುವ ಚಂಗ್ ವಾ ಚೀಣಿಯರ ಶಾಲೆ ಅನಿರ್ದಿಷ್ಟ ಕಾಲ ಬಂದಾಗಿದೆ.

ಚೀಣಕ್ಕೆ ಎಚ್ಚೆರಿಕೆ

ಶಾಂತಿ, ಸಮಾಜವಾದ ಮತ್ತು ತನ್ನ ಹಿತಾಸಕ್ತಿಯಿಂದ ಆಕ್ರಮಣಮಾಡಿರುವ ಪ್ರದೇಶದಿಂದ ವಾಪಸಾಗುವಂತೆ ನಪ ಚೀಣಾಕ್ಕೆ ರಕ್ಷಣಾ ಮಂತ್ರಿ ಶ್ರೀ ವಿ ಕೆ ಮೆನನ್ ಎಚ್ಚರಿಸಿರುವದಾಗಿ ಬೊಂಬಾಯಿ ವಾರ್ತೆ.

ಲಂಚ ಅಧಿಕವಾಗಿದೆ

ಪುಣೆಯ ಗೋಖಲೆ ಸಂಸ್ಥೆಯ ರಾಜ್ಯ ಶಾಸ್ತ್ರ ಡೈರೆಕ್ಟರರಾದ ಆಚಾರ್ಯ ಡಿ ಆರ್, ಗಾಡ್ಗೀಲರು ನಾಗ್ಪುರ ವಿಶ್ವವಿದ್ಯಾನಿಲಯದ 42 ನೆಯ ಘಟಿಕೋತ್ಸವವನ್ನು ಉದ್ದೇಶಿಸಿ ಭಾಷಣವನ್ನು ಮಾಡುತ್ತಾ, ಸ್ವಾತಂತ್ರ್ಯ ಬಂದನಂತರ ಲಂಚ ಹೆಚ್ಚಿದೆ, ಆದೂ ಉನ್ನತ ಮಟ್ಟದವರಲ್ಲಿ ಹೆಚ್ಚಿದೆ ಸ್ವಾತಂತ್ರ್ಯ ಸರ್ವ ಮಟ್ಟದಲ್ಲೂ ಒನರನ್ನು ಪ್ರೋತ್ಸಾಹಿಸಲು ಅವಕಾಶ ಮಾಡಬೇಕು ಎಂದು ನುಡಿದರು

ಅಣೆಕಟ್ಟು ನಿರ್ಮಾಣ

ಜೇಲಂ ನದಿಯ ಮೇಲೆ ನಿರ್ಮಿಸುವ ಮಂಗಳ ಅಣೆಕಟ್ಟು 354 ವಿ.ಲಿಯ ಡಾಲರಿನಷ್ಟು ವೆಚ್ಚದ್ದನ್ನು ನಿರ್ಮಿಸಲು ಅಮೆರಿಕಾ ಸಂಸ್ಥೆ ಒಪ್ಪಂದ ಮಾಡಿಕೊಂಡಿದೆ ಎಂದು ಸ್ಯಾನ್ ಫ್ರಾನ್ಸಿಸ್ಕೊ ವರದಿ

ಅರ್ಜಿಗಳ ಪರಿಶೀಲನೆ

ಮೈಸೂರು ಪಾರ್ಲಿಮೆಂಟ ಕ್ಷೇತ್ರದಿಂದ ಲೋಕಸಭೆಗೆ ಅರ್ಜಿಸಲ್ಲಿಸಿದವರ ಅರ್ಜಿಗಳ ಪರಿಶೀಲನೆ ನಿನ್ನೆ ನಡೆದು ಇಷ್ಟಗಳೆಲ್ಲವೂ ಅನುಮೋದಿತವಾದವು.

ಂಂ

ಮೈಸೂರು ನಗರದ ಜಿ ಸಿ ಎ ಎಂ ವಿದ್ಯಾರ್ಥಿಗಳು ಮುಷ್ಕರವನ್ನು ಮುಂದುವರಿಸುತ್ತಿರುವರು.

ಈ ಮಾಹೆ 25 ನೆಯ ತಾ|| ಬೆಳಿಗ್ಗೆ 9 ವರೆ ಗಂಟೆಗೆ ಶ್ರೀ ಶೃಂಗೇರಿ ಜಗದ್ಗುರುಗಳವರಾದ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರಿಗೆ ಬ್ರಾಹ್ಮಣ ಧರ್ವ ಸಹಾಯ ಸಭಾದಲ್ಲಿ ಪಾದಪೂಜೆ ಹಾಗೂ ವಿಜ್ಞಾಪನಾ ಪತ್ರವನ್ನ ಸಮರ್ಪಿಸಲಾಗುವದು.

ಚೀಣಾಕ್ಕೆ ಸವಾಲು ಹಾಕಲು ಭಾರತಕ್ಕೆ ಭಾರಿ ನೆರವನ್ನು ರಷ್ಯದ ಕೃಶ್ಚೇವ್ ಕೊಡಬಹುದೆಂದು ಲಂಡನ್ ವಾರ್ತೆ.

ವಿವಿಧ ವಿಷಯಗಳು

ಬೊಂಬಾಯಿನಲ್ಲಿ ಮೊನ್ನೆ ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನರು ಮಾತನಾಡುತ್ತಾ, ಪಾಕಿಸ್ತಾನದ ವಿಷಯದಲ್ಲಿ ಭಾರತದ ಭಯ ಸತ್ಯವಾಯಿತೆಂದರು ವಿಶ್ರರಾಷ್ಟ್ರಗಳನ್ನೂ ಕೇಳದೆ ತನ್ನ ರಕ್ಷಣೆಗೆ ವಿದೇಶಿ ಆಯುಧಗಳನ್ನು ಒಳಸುವದಾಗಿ ಪಾಕಿಸ್ತಾನದ ಅಧ್ಯಕ್ಷರಾದ ಅಯೂಬ ಖಾನರು ಹೇಳಿರುವದೇ ಇದಕ್ಕೆ ಕಾರಣ ಎಂದು ಅವರು ಹೇಳಿದರು.

ನಾಡಿಯಾದ ಕೃಷ್ಣಗರ ಕ್ಷೇತ್ರದಿಂದ ಐದು ರಾಜಕೀಯ ಪಕ್ಷಗಳನ್ನು ಸಿಎದುರಿಸಿ ಪಶ್ಚಿಮ ಬಂಗಾಳದ ವಿಧಾನ ಸಭೆಗೆ ಶ್ರೀ ರಾಮಕೃಷ್ಣ ಲಹಿರಿ ಎಂಬ ಕಿವಿ ಕೇಳದ ಹಾಗೂ ಮೂಕನು ಉಮೇದುವಾರಿಕೆ ಸಲ್ಲಿಸಿರುವನು.

65 ಮಂದಿಜುನ್ನು ಕರೆದುಕೊಂಡು ಹೋಗುವ ಸಂಪೂರ್ಣ ಪ್ಲಾಸ್ಟಿಕ್ಕಿನಲ್ಲಿ ತಯಾರಿಸಿದ ಹಡಗು ರಷ್ಯದಲ್ಲಿ ನಿರ್ಮಾಣವಾಗುತ್ತಿದೆ

ಕೆಲವು ಪೋರ್ಚುಗೀಸು ಅಧಿಕಾರಿಗಳನ್ನು ಕರೆದುಕೊಂಡು ಹೋಗಲು ವೀರಾ ಕ್ರಜ್ ಎಂಬ ಪೋರ್ಚುಗೀಸು ಹಡಗ ಗೋವಾಕ್ಕೆ ಬರುವುದು

ನೇಪಾಳಕ್ಕೆ ಚೀಣಿಯರಿಂದ ತೊಂದರೆ ಇಲ್ಲವೆಂದು ದೊರೆ ಮಹೇಂದ್ರರು ಖಟ್ಮಂಡುವಿನಲ್ಲಿ ತಿಳಿಸಿದ್ದಾರೆ.

ಭಾರತದ ಜನಗಣತಿಯ ಪೂರ್ಣ 1963 ರ ವೇಳೆಗೆ ಪ್ರಕಟವಾಗುವದು.

ಕಾಂಗ್ರೆಸಿಗೆ ಮಹಾ ಚುನಾವಣೆಯಲ್ಲಿ ಬೆಂಬಲಿಸಬೇಕೆಂದು ಮದ್ರಾಸಿನಲ್ಲಿ ಸೇರಿದ್ದ ಅಖಿಲ ಭಾರತ ಮುಸ್ಲಿಂಲೀಗು ಸಮಿತಿ ನಿರ್ಣಯಿಸಿದೆ

ತಂಕರಕೋಯಿಲಿನ ಶಾಲೆಯಲ್ಲಿ ಮಧ್ಯಾಹ್ನದ ಊಟ ಮೊನ್ನೆ ತಿಂದ 8 ವಯಸ್ಸಿನ ಅವಡಿಯಷ್ಟು ಸತ್ತಳು. ಮತ್ತೋರ್ವಳು ಪ್ರಜ್ಞಾಶೂನ್ಯಳಾದಳು, 42 ಮಂದಿ ಆಸ್ಪತ್ರೆಗೆ ಸೇರಿದರು

ಡೆನ್ಮಾರ್ಕು ಪ್ರಧಾನಿಗಳ ಆಗಮನ

ಮೈಸೂರು— ನಾಳೆ ಮಧ್ಯಾಹ್ನ 1-15 ಕ್ಕೆ ಡೆನ್ಮಾರ್ಕಿನ ಪ್ರಧಾನಿ ಮಿ || ಸಿಗೂ ಕಂಪಮನ್ ಮತ್ತು ಅವರ ಸತಿಯವರು ಬೆಂಗಳೂರಿನಿಂದ ಆಗಮಿಸುವರು.

ತಂಟೆಕೋರರ ಬಂಧನ

ಮೈಸೂರು— ರಸ್ತೆಯಲ್ಲಿ ಹೋಗಿಬರುವ ಜನಗಳ, ಸ್ತ್ರೀಯರ ಮೇಲೆ ಪಟಾಸು ಎಸೆದು ತೊಂದರೆಗೊಳಿಸುತ್ತಿದ್ದ ಹಲವು ಮಂದಿ ಮುಸ್ಲಿಮರು ಬಂಧಿಸಲ್ಪಟ್ಟಿರುವರು.

ಶ್ರೀ ಸದ್ಗುರು ಆರಾಧನಾ ಮಹೋತ್ಸವ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಜಗದ್ಗುರು ನಾಗಲಿಂಗ ಸ್ವಾಮಿಗಳ ಮಠದಲ್ಲಿ ಶ್ರೀಮಜ್ಜಗದ್ಗುರು ಶ್ರೀವತ್ಸಚ್ಚಿದಾನಂದ ನಂಜುಂಡ ಶಿವಯೋಗೀಂದ್ರ ಭಗವತ್ಪಾದಾಚಾರ್ಯ ಮಹಾಸ್ವಾಮಿಗಳವರ ಮೂವತ್ತೇಳನೆಯ ವಾರ್ಷಿಕ ಪುಣ್ಯ ದಿನಾಚರಣೆಯು ತಾ || 17-1-62 ರಿಂದ 22-1-62 ರವರೆಗೆ ವಿಧಿವತ್ತಾಗಿ ವೈಭವವಾಗಿ ನೆರವೇರಿತು ಪ್ರಾತಃಕಾಲ. ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ವೇದೋಕ್ತ ಮಹಾನ್ಯಾಸಪೂರ್ವಕ ಅಭಿಷೇಕ, ಷೋಡಶೋಪಚಾರ ಸಹಸ್ರನಾಮ ಪೂಜೆಗಳೂ, ವೇದಪಾರಾಯಣ, ಶಿವಗೀತಾ, ಗುರುಗೀತಾ ಪಾರಾಯಣಗಳೂ, ಸಾಯಂಕಾಲ ಮಹಾಪಂಚಾಕ್ಷರ ಜಪವೂ ಭಜನೆಯೂ ನೆರವೇರಿದವು. ಮೊನ್ನೆ ಭಾನುವಾರ ಶ್ರೀ ನಾಗಲಿಂಗೇಶ್ವರಸ್ವಾಮಿಯ ಪ್ರಾತಃಕಾಲ ಪೂಜಾನಂತರ ಶ್ರೀ ಶ್ರೀ ನೂತನ ಪಟ್ಟದ ಸಚ್ಚಿದಾನಂದ ಮಹಾದೇವಸ್ವಾಮಿಗಳವರು ಫಲಪುಷ್ಪಗಳ ಸಮೇತ ಮೇನಾದಲ್ಲಿ ಶ್ರೀ ಗದ್ದುಗೆಯ ಪೂಜೆ ಬೆಳೆಸಿದರು : ಮಧ್ಯಾಹ್ನ ಸಂತರ್ಪಣೆಯು ನಡೆಯಿತು ; ಸಂಜೆ ರಥದ ಮೇಲೆ ಶ್ರೀ ಗುರುಸ್ವಾಮಿಯೂ, ಮೇನಾದಲ್ಲಿ ಶ್ರೀ ಶ್ರೀ ನೂತನ ಪಟ್ಟದ ಸಚ್ಚಿದಾನಂದ ಮಹಾದೇವಸ್ವಾಮಿಗಳವರೂ, ಛತ್ರಚಾಮರಾದಿ ಸಕಲ ಬಿರುದುಗಳೊಡನೆ ಬಾಜಾಬಜಂತ್ರಿ ಭಜನೆಗಳ ಸಮೇತ ರಾಜಬೀದಿಗಳಲ್ಲಿ ಉತ್ಸವವೂ ನೆರವೇರಿತು. ನಿನ್ನೆ ಸೋಮವಾರ ಬೆಳಿಗ್ಗೆ ಶ್ರೀ ಶ್ರೀಗಳವರ ವಿಧ್ಯುಕ್ತ ಪಾದಪೂಜೆಯೂ, ಸದ್ಗುರು ಮಹಿಮಾ ವಿಷಯವಾಗಿ ಉಪನ್ಯಾಸಗಳೂ, ಮಧ್ಯಾಹ್ನ ಮಹಾಸಂತರ್ಪಣೆಯೂ ನೆರವೇರಿ, ಸಾಯಂಕಾಲ ಮಹಾಪಂಚಾಕ್ಷರ ಭಜನೆಯೊಡನೆ ಮಂಗಳವಾಯಿತು ಶ್ರೀಮಠದ ಬಹು ಮಂದಿ ಶಿಷ್ಯರೂ ಭಕ್ತರೂ ಭಾಗವಹಿಸಿದ್ದರು. ಶ್ರೀ ಸದ್ಗುರು ಮಹೋತ್ಸವವು ಸಾಂಗವಾಗಿ ಮತ್ತು ಯಶಸ್ವಿಯಾಗಿ ನೆರವೇರಿದುದು ಶ್ರೀ ಮಠೀಯ ಸರ್ವಾಧಿಕಾರಿಗಳಾದ ಬ್ರಂ || ಶ್ರೀ || ನಾಗೇಂದ್ರಸ್ಥಪತಿಗಳವರ ಮತ್ತು ಕಾರ್ಯದರ್ಶಿಗಳಾದ ಬ್ರಂ || ಶ್ರೀ || ನಾಗಲಿಂಗಸ್ವಾಮಿಗಳವರ ಶ್ರದ್ಧೆ ಆಸಕ್ತಿಗಳು ಮುಖ್ಯವೆಂದರೆ ಅತಿಶಯೋಕ್ತಿಯಲ್ಲ.

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

ವುಡ್ ಲ್ಯಾಂಡ್ಸ್ ಮಹೋನ್ನತ 7ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೆ

ದೇವ್‌ಆನಂದ್, ಆಶಾ ಪರಾಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ ಅತ್ಯಂತ ಮನರಂಜನ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ — ಕೀರ್ತಿಯುತ 4 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಅಟಗಳು]

SHAKTI SUDHA

A Superb Tonic



ಲೆನಿನ್ ಗ್ರಾಡಿನ ಎಲೆಕ್ಟ್ರೋಸಿಲಾ ಸಂಯಂತ್ರದ ಟ್ರೇಡ್ ಯೂನಿಯನ್ ಸಮಿತಿಯ ಪುಸ್ತಕ ಭಂಡಾರ

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅಶೋಕಾ ಫಾರ್ಮೆಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing
L. N. Press
Sivarampet, Mysore

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.